ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 17 ನೇ ಮಾರ್ಚ್, 2020

ನೋಂದಾಯಿತ ಸಂಘಗಳ ಕಾರ್ಯವೈಖರಿ ಬಗ್ಗೆ ತನಿಖೆ ನಡೆಸಲು ನೇಮಿಸಿದ ಸಮಿತಿಯ ವರದಿಯ ಬಗ್ಗೆ

ಶ್ರೀ ಕೆ. ವಿ. ನಾರಾಯಣಸ್ವಾಮಿ(ವಿಧಾನಸಭೆಯಿಂದ ಚುನಾಯಿತರಾದವರು):-

1093 (1279) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಸಂಘಗಳ ನೋಂದಾಣಿ ಕಾಯ್ದೆ ಪ್ರಕಾರ (Karnataka Society Registration Act) ನೋಂದಾಯಿಸಿರುವ ಅನೇಕ ಸಂಘಗಳ (ಕ್ಲಬ್ಸ್) ಕಾರ್ಯವೈಖರಿ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ನೇಮಿಸಿದ ಸದನ ಸಮಿತಿಯು ವರದಿ ಸಲ್ಲಿಸಿದೆಯೇ;

(ಆ) ಸಲ್ಲಿಸಿದ್ದಲ್ಲಿ, ಅದರ ಪ್ರತಿಯನ್ನು ನೀಡುವುದು ;

(ಇ) ವರದಿ ಸಲ್ಲಿಸಿದ ಪಕ್ಷದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳನ್ನು ತಿಳಿಸುವುದು ;

(ಈ) ಈ ವಿಳಂಬಗಳಿಂದ ಕ್ಲಬ್‌ಗಳಲ್ಲಿ ಸದಸ್ಯತ್ವ ಪಡೆಯಲು ಇಚ್ಛಿಸುವ ಶಾಸಕರುಗಳು ಅವಕಾಶ ವಂಚಿತರಾಗುತ್ತಿಲ್ಲವೇ ; ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ ;

(ಉ) ಶಾಸಕರುಗಳಿಗೆ ಸಂಘಗಳ ಸದಸ್ಯತ್ವ ನೀಡುವ ಸಲುವಾಗಿ ಕಾಯ್ದೆ ತಿದ್ದುಪಡಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ?